ಓ.ಎಸ್ಃ **474-2017**

ಪಿ. ಡಬ್ಲ್ಯೂ ಃ 02

**<u>ಸಾಕ್ಷಿಗೆ ದಿನಾಂಕ 14.11.2022 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಲ್.ಆರ್ ವಕೀಲರಿಂದ</u>**

ನಾನು ದ್ವಿತೀಯ ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ನನಗೆ ತಿಳಿದಿರುವುದಿಲ್ಲ. ಪ್ರತಿವಾದಿ ಮೆಡಿಕಲ್ ಸ್ಟೋರ್ ಮಾಲೀಕರಾಗಿರುತ್ತಾರೆ. ಪ್ರತಿವಾದಿ ನನಗೆ ಗೊತ್ತು. ನಾನು ಕೆ.ಆರ್ ಸಾಗರದಲ್ಲಿ ವಾಸವಿರುತ್ತೇನೆ. ವಾದಿ ಗಂಡ ನನಗೆ ಪರಿಚಯಸ್ಥರಲ್ಲ. ದಿ. 27.10.2014 ರಂದು ನಟರಾಜು ಎಂಬುವ ಪತ್ರಬರಹಗಾರರು ನಿಪಿ 1 ಮತ್ತು 2 ನ್ನು ಬರೆದಿರುತ್ತಾರೆ. ಗೋಪಾಲ್ ರಾವ್ ಪ್ರತಿವಾದಿ ಬರೆಸಿರುತ್ತಾರೆ. ಪತ್ರಬರಹಗಾರರು ನಟರಾಜು ಸಾಕ್ಷಿ ಜಗದೀಶ್ ಮತ್ತು ನಾನು ಇದ್ದೆವು ಮತ್ತು ಇನ್ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಪತ್ರವು ಬೆರಳಚ್ಚು ಮಾಡಿಸಿದ್ದಾಗಿರುತ್ತದೆ. ಬೆರಳಚ್ಚು ಮಾಡುವ ವೇಳೆಗೆ ನಾನು ಹಾಜರಿದ್ದೆ ಎಂಬ ಬಗ್ಗೆ ನೆನಪಿಲ್ಲ. ಸದರಿ ಪತ್ರದ ಒಕ್ಕಣೆ ಬಗ್ಗೆ ಯಾರು ಮಾಹಿತಿ ನೀಡಿದರು ಎಂದು ನನಗೆ ಗೊತ್ತಿಲ್ಲ. ತಾಲ್ಲೂಕು ಕಛೇರಿ ಪಕ್ಕದಲ್ಲಿ ಪತ್ರ ಬರಹಗಾರರ ಕಛೇರಿ ಇರುತ್ತದೆ. ಸದರಿ ಕಛೇರಿ ತಾಲ್ಲೂಕು ಕಛೇರಿ ಪಕ್ಕದಲ್ಲಿಲ್ಲ ಎಂದರೆ ಸರಿಯಲ್ಲ. ಮತ್ತೊಬ್ಬ ಸಾಕ್ಷಿದಾರರು ಹುಲಿಕೆರೆಯವರಾಗಿರುತ್ತಾರೆ. ನಾನು ಮುಖಪುಟದಲ್ಲಿ ಸಹಿ ಹಾಕಿರುತ್ತೇನೆ ಹಿಂಭಾಗದಲ್ಲಿ ಹಾಕಿರಬಹುದು. ನನಗೆ ಬಿಕ್ಲಮ್ ದಾರರು ಎಷ್ಟು ಕಡೆ ಸಹಿ ಮಾಡಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ.

ವಾದಿ ಮತ್ತು ಪ್ರತಿವಾದಿಯ ನಡುವೆ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ವಾದಿ ಸಂಬಂಧಿಕನಲ್ಲ. ನಾನು ವಾದಿಯ ಮಗನ ಸ್ನೇಹಿತ ಎಂದರೆ ಸರಿಯಲ್ಲ . ಬೆರಳಚ್ಚು ಮಾಡಿಸಿರುವುದು ನಾನು ನೋಡಿರುವುದಿಲ್ಲ. ನಾನು ವಾದಿಗೆ ಅನುಕೂಲವಾಗಲಿ

ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಗೆ ಯಾವುದೇ ಪ್ರೋನೋಟನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿ-ಪ್ರತಿವಾದಿ ಮತ್ತು ಸಾಕ್ಷಿಗಳ ಸಮ್ಮುಖದಲ್ಲಿ ಪ್ರೋನೋಟ್ ಬರೆದಿಲ್ಲ ಎಂದರೆ ಸರಿಯಲ್ಲ. ವಾದಿಯ ಗಂಡನಿಂದ ಪ್ರತಿವಾದಿ ಒಂದು ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ